3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 26/2020**

ಪ್ರಾಸಾ 10

ಚಾಸಾ 12

| | |
|---|---|
| ಹೆಸರು | ಶ್ರೀಕಾಂತ್.ಎಸ್ |
| ತಂದೆಯ ಹೆಸರು | ಶಿವರಾಂ |
| ವಯಸ್ಸು | 42 ವರ್ಷ |
| ಉದ್ಯೋಗ | ಪೊಲೀಸ್ ಇನ್ಸ್ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು |
| ವಾಸಸ್ಥಳ | ಬೆಂಗಳೂರು |

ಸಾಕ್ಷಿಯನ್ನು ದಿನಾಂಕ 06.07.2026 ರಂದು ವಿಸಿ ಮೂಲಕ ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು ಆಗಸ್ಟ್ 2019 ರಿಂದ ಫೆಬ್ರವರಿ 2020 ರವರೆಗೆ ನಾನು ಚಿಕ್ಕನಾಯಕನಹಳ್ಳಿ ಪೋ.ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿನಾಂಕ 19.10.2019 ರಂದು ರಾತ್ರಿ 7 ಗಂಟೆಗೆ ಚಾಸಾ.1 ರವರು ಠಾಣೆಗೆ ಹಾಜರಾಗಿ ನಿಪಿ.1 ರಂತೆ ದೂರನ್ನು ಸಲ್ಲಿಸಿರುತ್ತಾರೆ. ನಿಪಿ.1 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ನಂತರ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರ.ವ.ವರದಿಯನ್ನು ನಿಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು

ಗುರುತಿಸಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.13 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀ.ಎನ್.ಬಿ. ವಕೀಲರಿಂದ :**

3) ದೂರನ್ನು ಪಡೆದುಕೊಂಡ ನಂತರ ಓದಿರುತ್ತೇನೆ. ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ರಾತ್ರಿ 8 ಗಂಟೆಗೆ ಕಳುಹಿಸಿರುತ್ತೇನೆ. ನ್ಯಾಯಾಲಯಕ್ಕೆ ಪ್ರ.ವ.ವರದಿ ಯಾವಾಗ ಮುಟ್ಟಿರುತ್ತದೆ ಎಂದು ನನಗೆ ಗೊತ್ತಿಲ್ಲ. ಜಮೀನಿನ ಬಗ್ಗೆ ವ್ಯಾಜ್ಯ ಇರುತ್ತದೆ ಎಂದರೆ ಗೊತ್ತಿಲ್ಲ. ದಿಃ12.10.2019 ರಂದು ಅಡಿಕೆ ತೋಟದಲ್ಲಿ ಗಲಾಟೆಯಾಗಿರುತ್ತದೆ ಎಂದು 2 ನೇ ಆರೋಪಿ ಗಂಗಣ್ಣರವರು ಚಾಸಾ.6, ಚಾಸಾ.1 ರವರ ತಂದೆ ರಾಮಯ್ಯ, ಚಾಸಾ.2 ರವರ ಗಂಡ ತಮ್ಮಯ್ಯ ಮತ್ತು ಸ್ವಾಮಿರವರ ವಿರುದ್ದ ದೂರನ್ನು ದಿಃ14.10.2019 ರಂದು ದೂರನ್ನು ಸಲ್ಲಿಸಿದ್ದರು ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲಾತಿಗಳು ಸದರಿ ದೂರಿನ ಪ್ರತಿ ಮತ್ತು ಪ್ರ.ವ.ವರದಿ ಎಂದರೆ ಸರಿ. ಅವುಗಳನ್ನು ಆರೋಪಿಗಳ ಪರವಾಗಿ ನಿಡಿ.1 ಮತ್ತು 2 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ನಾನು ತನಿಖೆಯನ್ನು ಮಾಡಿ ದೋ.ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4) ಚಾಸಾ.1 ರವರು ದೂರನ್ನು ಕೊಟ್ಟ ನಂತರ ಸಂಜೆ 7 ಗಂಟೆಗೆ ನಾನು ಪ್ರಕರಣವನ್ನು ದಾಖಲು ಮಾಡಿಕೊಂಡಿಲ್ಲ ಮತ್ತು ಮಾರನೇ ದಿನ ಬೆಳಿಗ್ಗೆ 7 ಗಂಟೆಗೆ ಪ್ರಕರಣವನ್ನು ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಷ್ಕೆ ಕಳುಹಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ